# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ ದಂ ನ್ಯಾಯಾಲಯ
## ಶಹಾಪೂರ
## ಸಿ.ಸಿ ನಂಃ 721/2018

**ಫಿರ್ಯಾದಿದಾರಃ** ಕರ್ನಾಟಕ ಸರ್ಕಾರ ಶಹಾಪೂರ ಠಾಣೆ ಪೊಲೀಸರು.

// ವಿರುದ್ಧ //

**ಆರೋಪಿ ನಂ.1:** ಮಲ್ಲಿಕಾರ್ಜುನ @ ಸಣ್ಣರೆಡ್ಡೆಪ್ಪ ತಂದೆ
ಬಸವರಾಜ ಕಾವಲಿ, ವಯಾಃ 55 ವರ್ಷ, ಉಃ ಒಕ್ಕಲುತನ

**ಆರೋಪಿ ನಂ.2:** ದೊಡ್ಡರೆಡ್ಡೆಪ್ಪ ತಂದೆ ಬಸವರಾಜ ಕಾವಲಿ
ವಯಾಃ 21 ವರ್ಷ, ಉಃ ಒಕ್ಕಲುತನ

**ಆರೋಪಿ ನಂ.3:** ಮಲ್ಲಪ್ಪ ತಂದೆ ಬಸವರಾಜ ಕಾವಲಿ
ವಯಾಃ 30 ವರ್ಷ, ಉಃ ಒಕ್ಕಲುತನ

**ಆರೋಪಿ ನಂ.4:** ಯಂಕಮ್ಮ ಗಂಡ ಮಲ್ಲಪ್ಪ ಕಾವಲಿ
ವಯಾಃ 23 ವರ್ಷ, ಉಃ ಹೊಲಮನೆ ಕೆಲಸ

**ಆರೋಪಿ ನಂ.5:** ದೇವಿಂದ್ರಮ್ಮ ಗಂಡ ಬಸವರಾಜ ಕಾವಲಿ
ವಯಾಃ 48 ವರ್ಷ, ಉಃ ಹೊಲಮನೆ ಕೆಲಸ
ಎಲ್ಲರೂ ಸಾಃ ಕುಮ್ನೂರು ತಾಃ ಶಹಾಪೂರ

**ದಂಡ ಪ್ರಕ್ರೀಯಾ ಸಂಹಿತೆ ಕಲಂಃ 313 ರಡಿಯಲ್ಲಿ ಆರೋಪಿತರ ಹೇಳಿಕೆ.**

ಪ್ರಃ 01- ಅಭಿಯೋಜನೆಯ ಪರವಾಗಿ ನುಡಿದ ಸಾಕ್ಷವನ್ನು ನೀನು ಕೇಳಿರುವೆಯಾ?

ಉತ್ತರಃ

ಪ್ರ-02. ಪ್ರಾಸಾ-1 ಚಂದಪ್ಪ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ 31.08.2017 ರಂದು ಮಧ್ಯಾಹ್ನ 1 ಗಂಟೆ 30 ನಿಮಿಷಕ್ಕೆ ತಾನು ಮತ್ತು ಚಾಸಾ-6 ಮತ್ತು 7 ಹೊಲದಿಂದ ಮನೆಗೆ ಬಂದಾಗ

ಮನೆಯ ಮುಂದೆ ಮಾತಾನಾಡುತ್ತಾ ನಿಂತಾಗ ಆರೋಪತರೆಲ್ಲರೂ ಸೇರಿ ಜಗಳ ತೆಗೆದು ತಮಗೆ ಹೊಡೆಯುತ್ತೇವೆ ಬಡೆಯುತ್ತೇವೆ ನಿಮಗೆ ಸೊಕ್ಕು ಬಸಹ ಆಗಿದೆ ಎಂದು 1 ನೇ ಆರೋಪಿಯು ತನಗೆ ಕಟ್ಟಿಗೆಯಿಂದ ಹೊಡೆಯಲು ಬಂದಾಗ ತಾನು ತಪ್ಪಿ ಸಿಕೊಂಡಿರುತ್ತಾನೆ. ಚಾಸಾ-7 ರವರನ್ನು 2 ಮತ್ತು 3 ನೇ ಆರೋಪಿತರು ಹಿಡಿದುಕೊಂಡಾಗ 1 ನೇ ಆರೋಪಿ ಕೊಡಲಿಯಿಂದ ಹದ್ದಕ್ಕೆ ಹೋಡೆದಿರುತ್ತಾನೆ, ಆಗ ರಕ್ತಗಾಯವಾಗಿರುತ್ತದೆ. ಮತ್ತೆ 1 ನೇ ಆರೋಪಿಯು ಚಾಸಾ-7 ರವರಿಗೆ ಪಕ್ಕೆಗೆ ಹೋಡೆದಿರುತ್ತಾರೆ, 4 ಮತ್ತು 5 ನೇ ಆರೋಪಿತರು ತನಗೆ ಕೈಯಿಂದ ಬೆನ್ನಿಗೆ ಮತ್ತು ಎದೆಗೆ ಹೋಡೆದಿರುತ್ತಾರೆ, ಚಾಸಾ-4 ರಿಂದ 6 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ ಆರೋಪಿತರೆಲ್ಲರೂ ಸೇರಿ ಅವಾಚ್ಯವಾಗಿ ಬೈದಿರುತ್ತಾರೆ, ನಂತರ ತಾನು ಮತ್ತು ಚಾಸಾ-7 ರವರು ಸೇರಿ ಯಾದಗಿರಿ ಜಿಲ್ಲಾ ಆಸ್ಪತ್ರೆಗೆ ಹೋಗಿರುತ್ತಾರೆ ಹೆಚ್ಚಿ ನ ಚಿಕ್ಸಿತೆ ಗಾಗಿ ರಾಯಚೂರ ಆಸ್ಪತ್ರೆಗೆ ಹೋಗಿರುತ್ತಾರೆ, 1 ವಾರದ ನಂತರ ತಾನು ಪೊಲೀಸರ ಠಾಣೆಗೆ ಹೋಗಿ ಆರೋಪಿತರ ವಿರುದ್ದ ದೂರನ್ನು ನೀಡಿರುತ್ತಾನೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-03. ಪ್ರಾಸಾ-5 ಡಾ. ದೀಪಿಕಾ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ 31.08.2017 ರಂದು ರಾಃ 05.25 ಪಿ.ಎಂ ಗಂಟೆಗೆ ಚಾಸಾ-7 ರವರು ಹಲ್ಲೆಯ ಹಿನ್ನೆಲೆಯಲ್ಲಿ ಚಿಕಿತ್ತೆಗಾಗಿ ಬಂದಿದ್ದು ಅವರನ್ನು ಪರೀಕ್ಷೆಗೆ ಒಳಪಡಿಸಿದಾಗ ಚಾಸಾ-7 ರವರ ಎಡಬಾಗದ ದವಡೆಯ ಮೇಲೆ ಹರಿತವಾದ ಗಾಯ ಕಂಡು ಬಂದಿರುತ್ತದೆ. ಅದರ ಅಳತೆ 8x4x2 cm ಇರುತ್ತದೆ. ನಂತರ ಚಾಸಾ-7 ರವರನ್ನು ಹೆಚ್ಚಿ ನ ಚಿಕಿತ್ಸೆ GGH ರಾಯಚೂರಿಗೆ ಕಳುಹಿಸಿಕೊಟ್ಟಿರುತ್ತೇನೆ. ಸದರಿ ರಾಯಚೂರಿನ ಆಸ್ಪತ್ರೆಯಲ್ಲಿ ಎಕ್ಸರೇ ಮತ್ತು ಸಿಟಿ ಸ್ಯಾನ ಮಾಡಿದಾಗ ಎಕ್ಸರೇ ಅಲ್ಲಿ ಏನು ಕಂಡು ಬಂದಿರುವುದಿಲ್ಲ, ಅದರೇ ಸಿಟಿ ಸ್ಯಾನನಲ್ಲಿ ಚಾಸಾ-7 ರವರ ಎಡದವಡೆಯಲ್ಲಿ ಮುರಿತವಾಗಿರುವುದು ಕಂಡು ಬಂದಿರುತ್ತದೆ. ತನ್ನ ಅಭಿಪ್ರಾಯದಂತೆ ಮೇಲಿನ ಗಾಯವು ತೀವ್ರ ಸ್ವರೂಪದ ಗಾಯ ಆಗಿರುತ್ತದೆ. ಸದರಿ ಗಾಯದ

ಅವಧಿಯು 6 ತಾಸಿನ ಒಳಗಾಗಿರುತ್ತದೆ. ಸದರಿ ಗಾಯವು ಹರಿತವಾದ ಗಟ್ಟಿ ವಸ್ತುಗಳಿಂದ ಆಗಿರುವ ಸಾಧ್ಯತೆ ಆಗಿರುತ್ತದೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-04. ಪ್ರಾಸಾ-6 ಗಂಗಾಧರ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿನಾಂಕ 03.10.2017 ರಂದು ತಾನು ಠಾಣೆಯಲ್ಲಿದ್ದಾಗ ಸದರಿ ಪ್ರಕರಣದಲ್ಲಿನ ಆರೋಪಿತರು ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದುಕೊಂಡು ಬಂದ ತನ್ನ ಮುಂದೆ ಹಾಜರು ಇರುತ್ತಾರೆ. ನಂತರ ಆರೋಪಿತರು ಹಾಜರುಪಡಿಸಿದ ದಾಖಲಾತಿಗಳನ್ನು ಪರಿಶೀಲಿಸಿ ನಂತರ ಚಾಸಾ-7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾನೆ. ನಂತರ ಮುಂದಿನ ತನಿಖೆಗಾಗಿ ಪ್ರಕರಣದ ಕಡತವನ್ನು ಚಾಸಾ-11 ರವರಿಗೆ ವಹಿಸಿಕೊಂಟ್ಟಿರುತ್ತೆನೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-05. ಪ್ರಾಸಾ-7 ಕಾಳಪ್ಪ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ತಾನು ದಿಃ 23.01.2018 ರಂದು ಸದರಿ ಪ್ರಕರಣದ ಕಡತವನ್ನು ಚಾಸಾ-10 ರವರಿಂದ ಪಡೆದುಕೊಂಡು ಪರಿಶೀಲಿಸಿರುತ್ತಾರೆ. ದಿನಾಂಕಃ 21.01.2018 ರಂದು ಚಾಸಾ-7 ರವರ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೆನೆ, ನಂತರ ತನಿಖೆಯನ್ನು ಪುರ್ಣಗೊಳಿಸಿ ಮಾನ್ಯ ನ್ಯಾಯಾಲಯಕ್ಕೆ ದೋಷಾರೋಪಣಾ ಪಟ್ಟಿಯನ್ನು ಕಳುಹಿಸಿಕೊಟ್ಟಿರುತ್ತೆನೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-06. ಪ್ರಾಸಾ-8 ಚಂದ್ರಶೇಖರ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ದಿಃ 08.09.2017 ರಂದು ತಾನು ಠಾಣಾ ಕರ್ತವ್ಯದಲ್ಲಿ ಇದ್ದಾಗ ಚಾಸಾ-1 ರವರು ಠಾಣೆಗೆ ಹಾಜರಾಗಿ ಆರೋಪಿತರ ವಿರುದ್ದ ಫಿರ್ಯಾಧಿಯನ್ನು ನೀಡಿರುತ್ತಾರೆ. ಸದರಿ ಚಾಸಾ-1 ರವರ ಪಿರ್ಯಾದಿಯ ಆಧಾರದ ಮೇರೆಗೆ

ಠಾಣಾ ಗುನ್ನೆ ನಂ.128/2017 ರಂತೆ ಆರೋಪಿತನ ವಿರುದ್ಧ ಪ್ರ.ವ.ವರದಿಯನ್ನು ತಯಾರಿಸಿ ಪ್ರಕರಣ ದಾಖಲಿಸಿಕೊಂಡಿರುತ್ತೇನೆ. ನಂತರ ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಕಳುಹಿಸಿಕೊಟ್ಟಿರುತ್ತಾನೆ. ದಿಃ 09.09.2017 ರಂದು ಬೆಃ 09.00 ರಿಂದ 10.00 ರವರೆಗೆ ಚಾಸಾ-2 ಮತ್ತು 3 ರವರ ಸಮಕ್ಷಮ ಗುನ್ನೆ ಸ್ಥಳದ ಪಂಚನಾಮೆಯನ್ನು ಕೈಗೊಂಡಿರುತ್ತಾರೆ. ಅದೇ ಸಮಯದಲ್ಲಿ ಕೊಡಲಿ ಮತ್ತು ಕಟ್ಟಿಗೆಯನ್ನು ಜಪ್ತಿ ಪಡಿಸಿಕೊಂಡಿರುತ್ತಾನೆ. ಸದರಿ ಪ್ರಕರಣದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ಪಡೆದುಕೊಂಡಿರುತ್ತಾನೆ. ನಂತರ ಮುಂದಿನ ತನಿಖೆಗಾಗಿ ಸದರಿ ಪ್ರಕರಣವನ್ನು ಚಾಸಾ-10 ರವರಿಗೆ ವಹಿಸಿಕೊಟ್ಟಿರುತ್ತೇನೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ-07. ಪ್ರಾಸಾ-9 ರಂಗಪ್ಪ ಇವರು ತಮ್ಮ ವಿಚಾರಣೆ ವೇಳೆಯಲ್ಲಿ, ಸುಮಾರು 8 ವರ್ಷಗಳ ಹಿಂದೆ ಮಧ್ಯಾಹ್ನ 1 ಗಂಟೆ 30 ನಿಮಿಷಕ್ಕೆ ತಾನು ಮತ್ತು ಚಾಸಾ-1 ಮತ್ತು 7 ಹೋಲದಿಂದ ಮನೆಗೆ ಬಂದಾಗ ಮನೆಯ ಮುಂದೆ ಮಾತಾನಾಡುತ್ತಾ ನಿಂತಾಗ ಆರೋಪಿತರೆಲ್ಲರೂ ಸೇರಿ ಜಗಳ ತೆಗೆದು ತಮಗೆ ಹೊಡೆಯುತ್ತೇವೆ ಬಡೆಯತ್ತೇವೆ ನಿಮಗೆ ಸೊಕ್ಕು ಬಹಳ ಆಗಿದೆ ಎಂದು 1 ನೇ ಆರೋಪಿಯು ತನಗೆ ಕಟ್ಟಿಗೆಯಿಂದ ಹೊಡೆಯಲು ಬಂದಾಗ ತಾನು ತಪ್ಪಿಸಿಕೊಂಡಿರುತ್ತೇನೆ, ಚಾಸಾ-7 ರವರನ್ನು 2 ಮತ್ತು 3 ನೇ ಆರೋಪಿತರು ಹಿಡಿದುಕೊಂಡಾಗ 1 ನೇ ಆರೋಪಿಯು ಕೊಡಲಿಯಿಂದ ಗದ್ದಕ್ಕೆ ಹೋಡೆದಿರುತ್ತಾನೆ, ಆಗ ರಕ್ತಗಾಯವಾಗಿರುತ್ತದೆ ಮತ್ತೆ 1 ನೇ ಆರೋಪಿಯು ಚಾಸಾ-7 ರವರಿಗೆ ಪಕ್ಕೆಗೆ ಹೋಡೆದಿರುತ್ತಾರೆ. 4 ಮತ್ತು 5 ನೇ ಆರೋಪಿತರು ಚಾಸಾ-1 ರವರಿಗೆ ಕೈಯಿಂದ ಬೆನ್ನಿಗೆ ಮತ್ತು ಎದೆಗೆ ಹೋಡೆದಿರುತ್ತಾರೆ. ತಾನು ಮತ್ತು ಚಾಸಾ-4 ಮತ್ತು 5 ರವರು ಬಂದು ಜಗಳವನ್ನು ಬಿಡಿಸಿರುತ್ತಾರೆ, ಆರೋಪಿತರೆಲ್ಲರೂ ಸೇರಿ ಅವಾಚ್ಯವಾಗಿ ಬೈದಿರುತ್ತಾರೆ. ಪೋಲಿಸರ ಮುಂದೆ ಹೇಳಿಕೆಯನ್ನು ನೀಡಿರುತ್ತಾನೆ. ಎಂದು ಸಾಕ್ಷಿ ನುಡಿದಿರುತ್ತಾರೆ ಇದಕ್ಕೆ ನೀವು ಏನು ಹೇಳುವಿರಿ?

ಉತ್ತರಃ

ಪ್ರ- 08. ನಿಮ್ಮ ಪರ ಸಾಕ್ಷಿ ವಿಚಾರಣೆ ಮಾಡಿಸುವಿರಾ?

ಉತ್ತರಃ

ಪ್ರ-09. ನಿಮಗೆ ಈ ಪ್ರಕರಣದಲ್ಲಿ ಏನನ್ನಾದರೂ ಹೇಳುವುದು ಇದೆಯಾ?

ಉತ್ತರಃ

(ಈ ಮೇಲೆ ಹೇಳಿದ ಎಲ್ಲಾ ಸಾಕ್ಷಿಗಳ ಹೇಳಿಕೆಯನ್ನು ಆರೋಪಿಗೆ ತಿಳಿಯುವ ಭಾಷೆಯಲ್ಲಿ ಓದಿ ಹೇಳಿ, ಅವರು ಕೊಟ್ಟ ಉತ್ತರವನ್ನು ಯಥಾವತ್ತಾಗಿ ಬರೆದುಕೊಂಡು ದೃಢೀಕರಿಸಲಾಯಿತು.)

ದಿನಾಂಕಃ
ಸ್ಥಳಃ ಶಹಾಪೂರ

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ
ಶಹಾಪೂರ.